**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ.</u>**

**<u>ಸಿ.ಸಿ.ನಂ.577/2016</u>**

ಪಿರ್ಯಾದಿದಾರರುಃ ಯಡ್ರಾಮಿ ಪೊಲೀಸ್ ಠಾಣೆ.

**ವಿರುದ್ಧ**

**ಆರೋಪಿತರುಃ**

1. ಅಬ್ದುಲ ರಜಾಕ ತಂದೆ ಮುರ್ತುಜಾಸಾಬ ನಾಯಕೋಡಿ
   ವಃ 25ವರ್ಷ, ಉಃ ಚಾಲಕ,
   ಸಾಃ ಕಲಕೇರಿ, ತಾಃ ಸಿಂಧಗಿ.

2. ಅಲಿಸಾಬ ತಂದೆ ಬಂದಗಿಸಾಬ ನಡುವಿನಮನಿ
   ವಃ 50ವರ್ಷ, ಉಃ ಒಕ್ಕಲುತನ,

3. ಲಾಳೆಸಾಬ ತಂದೆ ಬಂದಗಿಸಾಬ ನಡುವಿನಮನಿ
   ವಃ 43ವರ್ಷ, ಉಃ ಒಕ್ಕಲುತನ,

4. ಸದ್ದಾಮ ತಂದೆ ಬಂದಗಿಸಾಬ ನಡುವಿನಮನಿ
   ವಃ 24 ವರ್ಷ, ಉಃ ಚಾಲಕ,

   ಆ-2 ರಿಂದ ಆ-4 ನೆದ್ದವರು ಸಾಃ ಯಂಕಂಚಿ, ತಾಃ ಜೇವರ್ಗಿ

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತರ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ ಆ-1

ಆ-2

ಆ-3

ಆ-4

ಪ್ರಃ2: ಚಾಸಾ-1 ಸಂತೋಷ, ಚಾಲಕ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 29-05-2016 ರಂದು ರಾತ್ರಿ 7-30 ಕ್ಕೆ ಶಹಾಪೂರದಿಂದ ಸಿಂಧಗಿಗೆ ತಾನು ಬಸ್ಸ ನಂ.ಕೆಎ-33/ಎಫ್-0196 ನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ಧೆ ಆಗ ಸದರಿ ಬಸಗೆ ಚಾಸ—6 ಅವರು ನಿರ್ವಾಹಕರಾಗಿದ್ದರು, ನಗರಳ್ಳಿ ಬ್ರಿಜ ಹತ್ತಿರ ತಮ್ಮ ಹಿಂದಿನಿಂದ ಒಂದು ಕ್ರೂಜರ ವಾಹನ ಬಂದು ತಮ್ಮ ಬಸ್ಸಿನ ಮುಂದು ಬಂದು ಬ್ರೇಕ ಹಾಕಿದರು, ಅದರಿಂದ ತಮ್ಮ ಬಸ್ಸು ಕ್ರೂಜರಗೆ ತಾಗಿತು, ಕ್ರೂಜರ ಚಾಲಕನು ತನಗೆ ಚಾಲನಾ ಸೀಟಿನಿಂದ ಕೆಳಗೆ ಎಳೆದು ಕಲ್ಲಿನಿಂದ ತನ್ನ ಸೊಂಟಕ್ಕೆ ಮತ್ತು ಕಾಲಿಗೆ ಹೊಡೆದನು, ಜಗಳ ಬಿಡಿಸಲು ಬಂದ ತಮ್ಮ ನಿರ್ವಾಹಕನಿಗೆ ಕಲ್ಲಿನಿಂದ ತಲೆಗೆ ಹೊಡೆದನು, ನಂತರ ಕ್ರೂಜರ ವಾಹನ್ನು ತೆಗೆದು ಕೊಂಡು ಹೊರಟುಹೋದ ಸದರಿ ಕ್ರೂಜರನಲ್ಲಿ 10-12 ಜನರಿದ್ದರೂ ಸದರಿ ವಾಹನದ ನಂ.ಕೆಎ-28/ಎನ್-5028 ಆಗಿತ್ತು, ಕ್ರೂಜರ ವಾಹನದ ಚಾಲಕನು ಮುಂದು ಬಂದರೆ ಹೊಡೆಯುತ್ತೇನೆಂದು ಜೀವದ ಬೆದರಿಕೆ ಹಾಕಿದನು, ತಮ್ಮ ಬಸ್ಸಿನ ಗ್ಲಾಸಗಳನ್ನು ಕಲ್ಲುಗಳಿಂದ ಹೊಡೆದು ಸರಕಾರಿ ಆಸ್ತಿಗೆ ಡ್ಯಾಮೇಜ ಮಾಡಿದರು, ತನಗೆ ಅವಾಚ್ಯ ಶಬ್ದಗಳಿಂದ ಬೈದರು. ನಂತರ ತಾನು ಮೇಲಾಧಿಕಾರಿಗಳು ಬಂದು ತನಗೆ ಆಸ್ಪತ್ರೆಗೆ ಕರೆದುಕೊಂಡು ಹೋದರು, ದಿನಾಂಕ 30-05-2016 ರಂದು ಮುಂಜಾನೆ 10-00 ಗಂಟೆಗೆ ಪೋಲಿಸರಿಗೆ ಆಸ್ಪತ್ರೆಯಲಿಲ ಹೇಳಿಕೆ ನೀಡಿರುತ್ತೇನೆ, ತನಗೆ ನಾಲ್ಕು ಜನರು ಹಲ್ಲೆ ಮಾಡಿರುತ್ತಾರೆ, ಸದರಿ ಬಸ್ಸಿನ ಗ್ಲಾಸ ಒಡೆದಿದ್ದರಿಂದ ರೂ.10,000/- ಹಾನಿಯಾಗಿರುತ್ತದೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಪ್ರಃ3: ಚಾಸಾ-2 ಸೀತಾರಾಮ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ತಾನು ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿ ತನ ಸಹಿ ಇರುತ್ತದೆ, ಸದರಿ ಸಹಿಯನ್ನು ನಾಗರಳ್ಳಿ ಬ್ರಿಜ ಹತ್ತಿರ ಮಾಡಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಪ್ರಃ4: ಚಾಸಾ-3 ಸೋಮು, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ತಾನು ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿ ತನ ಸಹಿ ಇರುತ್ತದೆ, ಸದರಿ ಸಹಿಯನ್ನು ನಾಗರಳ್ಳಿ ಬ್ರಿಜ ಹತ್ತಿರ ಮಾಡಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಪ್ರಃ5: ಚಾಸಾ-8 ದತ್ತು, ಕಂಡಕ್ಟರ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ಆರು ವರ್ಷಗಳ ಹಿಂದೆ ತಾನು ಮತ್ತು ಚಾಸಾ-1 ಅವರು ಶಹಾಪೂರದಿಂದ ಸಿಂಧಗಿಗೆ ಬಸ್ಸ ನಂ.ಕೆಎ-33/ಎಫ್-0196 ನ್ನು ಹೋಗುತ್ತಿದ್ದಾಗ ನಾಗರಳ್ಳಿ ಬ್ರಿಜ ಹತ್ತಿರ, ರಾತ್ರಿ 08-30 ಗಂಟೆಗೆ ಕ್ರೂಜರ ವಾಹನ ಬಂದು ತಮ್ಮ ಬಸ್ಸಿಗೆ ಅಡ್ಡಹಾಕಿ ನಮ್ಮ ಬಸ್ಸಿನ ಚಾಲಕನಿಗೆ ಜಗ್ಗಿ 4-5 ಮಂದಿ ಕಲ್ಲು ಮತ್ತು ಕೈಗಳಿಂದ ಹೊಡೆದರು, ಕಲ್ಲು ಬಸ್ಸಿನ ಗ್ಲಾಸಿಗೆ ಬಡಿದು ನಮಗೂ ಬಡಿಯಿತು, ನಂತರ ನನಗೆ ಚೆಕ್ಕರ ಬಂದು ಬಿದ್ದಿರುತ್ತೇನೆ, ನಂತರ ನನಗೆ ಆಸ್ಪತ್ರೆಯಲ್ಲಿ ಎಚ್ಚರವಾಯಿತು, ಬಸ್ಸಿನ ಗ್ಲಾಸ ಒಡೆದಿದ್ದರಿಂದ 9-10 ಸಾವಿರ ರೂ. ನಷ್ಟವಾಗಿರುತ್ತದೆ, ಸದರಿ ಕ್ರೂಜರ ವಾಹನದ ನಂ.ಕೆಎ-28/ಎನ್-5028 ಆಗಿತ್ತು, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಪ್ರಃ6: ಚಾಸಾ-13 ಹಣಮಂತ ಎ ಎಸ್ ಐ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 30.05.2016 ರಂದು ಬೆಳಿಗ್ಗೆ 10.00 ಚಾಸಾ-12 ರವರನ್ನು ಎಂ.ಎಲ್.ಸಿ. ಕುರಿತು ಜೇವರ್ಗಿ ಸರಕಾರಿ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಚಾಸಾ-12 ರವರು ಚಾಸಾ-1 ರವರ ಎಂ ಎಲ್ ಸಿ ವರದಿಯನ್ನು ಪಡೆದು ಮದ್ಯಾಹ್ನ 3.30 ಗಂಟೆಗೆ ಠಾಣೆಗೆ ಹಾಜರಾಗಿ ನೀಡಿದ ಎಂ ಎಲ್ ಸಿ ಹೇಳಿಕೆಯ ಮೇಲಿಂದ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆನಂತರ ಪ್ರ.ವ.ವ. ತಯಾರಿಸಿ

ಮಾನ್ಯ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ನೀಡಿರುತ್ತೇನೆ. ಅದೇ ದಿನ ಚಾಸಾ-7 ರವರು ತೋರಿಸಿದ ಘಟನಾ ಸ್ಥಳಕ್ಕೆ ಬೇಟಿ ನೀಡಿ ಪಂಚರ ಸಮಕ್ಷಮ ಸಾಯಂಕಾಲ 5.30 ರಿಂದ 6.30 ಪಂಚನಾಮೆಯನ್ನು ಜರುಗಿಸಿ 04 ಹಿಡಿಗಾತ್ರದ ಕಲ್ಲಗಳನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ಅದೆ ದಿನ ಚಾಸಾ-6 ರಿಂದ 8 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-14 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಪ್ರಃ7: ಚಾಸಾ-11 ಡಾಃ ಸಂತೋಷ, ವೈದ್ಯಾಧಿಕಾರಿಗಳು ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 30.05.2016 ರಂದು ಮಧ್ಯಾಹ್ನ 12.00 ಗಂಟೆಗೆ ಚಾಸಾ 1 ರವರು ಹಲ್ಲೆಯ ಇತಿಹಾಸದೊಂದಿಗೆ ಪಿಸಿ-1261 ರವರ ಜೊತೆಗೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ತಾನು ಅವರನ್ನು ಪರೀಕ್ಷಿಸಲಾಗಿ, ಚಾಸಾ 1 ರವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. Pain in the back and Left knee joint.

ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿರುತ್ತವೆ. ಅದರ ಬಗ್ಗೆ ತಾನು ತನಿಖಾಧಿಕಾರಿಗೆ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಸದರಿ ಗಾಯಗಳು ಕಲ್ಲಿನಿಂದ ಬೆನ್ನಿಗೆ ಮತ್ತು ಎಡಗಾಲಿನ ಮೊಳಕಾಲಿಗೆ ಹೊಡೆದರೆ ಗಾಯಗಳು ಆಗಬಹುದಾದ ಸಾದ್ಯತೆಗಳಿರುತ್ತವೆ.

ದಿನಾಂಕ 30.05.2016 ರಂದು ಮಧ್ಯಾಹ್ನ 12.00 ಗಂಟೆಗೆ ಚಾಸಾ-6 ರವರು ಹಲ್ಲೆಯ ಇತಿಹಾಸದೊಂದಿಗೆ ಪಿಸಿ-1261 ರವರ ಜೊತೆಗೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ನಾನು ಅವರನ್ನು ಪರೀಕ್ಷಿಸಲಾಗಿ, ಚಾಸಾ 6 ರವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. Pain all over the body.

ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿರುತ್ತವೆ. ಅದರ ಬಗ್ಗೆ ನಾನು ತನಿಖಾಧಿಕಾರಿಗೆ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಸದರಿ ಗಾಯಗಳು ಕಲ್ಲಿನಿಂದ ಬೆನ್ನಿಗೆ ಮತ್ತು ಎಡಗಾಲಿನ ಮೊಳಕಾಲಿಗೆ ಹೊಡೆದರೆ ಗಾಯಗಳು ಆಗಬಹುದಾದ ಸಾದ್ಯತೆಗಳಿರುತ್ತವೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಪ್ರಃ8: ಚಾಸಾ-7 ಪರಶುರಾಮ, ಚಾಲಕ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, 2016 ರಲ್ಲಿ ತಾನು ಗೋಗಿ ಗ್ರಾಮದಿಂದ ಸಿಂಧಗಿಗೆ ಬಸಿಸನಲ್ಲಿ ಹೋಗುತ್ತಿದ್ದಾಗ ನಾಗರಳ್ಳಿ ಹತ್ತಿರ, ಎಕಾಎಕಿ ಒಂದು ಕ್ರೂಜರ ವಾಹನ ಒವರಟೇಕ ಮಾಡಿ ಮುಂದು ಹೋಗಿರುತ್ತದೆ, ನಂತರ ಬಸ್ಸಿನ ಚಾಲಕ ಮತ್ತು ಕ್ರೂಜರ ಚಾಲಕರ ನಡುವೆ ಜಗಳವಾಗಿರುತ್ತದೆ, ಸದರಿ ಜಗಳದಲ್ಲಿ ಕಲ್ಲು ತೂರಾಟವಾಗಿದ್ದರಿಂದ ಚಾಸಾ-1 ಮತ್ತು 6 ಅವರಿಗೆ ಗಾಯಗಳಾಗಿರುತ್ತವೆ, ಆ

ಬಗ್ಗೆ ಪೊಲೀಸರ ಮುಂದು ಹೇಳಿದೆ ನೀಡಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಪ್ರಃ9: ಚಾಸಾ-8 ಬಸ್ಸಪ್ಪ, ನಿವೃತ್ತ ಕಂಟ್ರೋಲರ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, 2016 ರಲ್ಲಿ ತಾನು ಮನೆಯಲ್ಲಿದ್ದಾಗ ಚಾಸಾ-9 ಅವರು ತನಗೆ ಫೋನ ಮಾಡಿ ಹೇಳಿದ್ದೇನಂದರೆ, ನಾಗರಳ್ಳಿ ಬ್ರಿಜ ಹತ್ತಿರ, ಶಹಾಪೂರ-ಸಿಂಧಗಿಗೆ ಹೋಗುತ್ತಿದ್ದ ಬಸ್ಸಿಗೆ ಸಂಬಂಧಿಸಿದಂತೆ ಗಲಾಟೆಯಾಗಿದೆ ಎಂದು ಹೇಳಿದರು, ನಂತರ ತಾನು ಘಟನಾ ಸ್ಥ,ಳಕ್ಕೆ ಹೋಗಿ ನೋಡಲಾಗಿ ಚಾಸಾ-1 ಮತ್ತು 6 ಅವರಿಗೆ ಯಡ್ರಾಮಿ ಆಸ್ಪತ್ರೆಗೆ ಕೆರೆದುಕೊಂಡು ಹೋಗಿ ನಂತರ ಹೆಚ್ಚಿನ ಉಪಚಾರಕ್ಕಾಗಿ ಜೇವರ್ಗಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ, ಕ್ರೂಜರ ವಾಹನದ ಚಾಲಕ ತಮಗೆ ಸೈಡ ಕೊಡದ ಕಾರಣ ಜಗಳವಾಗಿರುತ್ತದೆಂದು ಚಾಸಾ-6 ಅವರು ತಮಗೆ ತಿಳಿಸಿದರು, ಚಾಸಾ-1 ಮತ್ತು 6 ಅವರಿಗೆ ತಲೆಗೆ ಮತ್ತು ಕಾಲಿಗೆ ಪೆಟ್ಟಾಗಿರುತ್ತು, ಎಂದು ಚಾಸಾ-1 ಮತ್ತು 6 ಅವರು ಹೇಳಿರುತ್ತಾರೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಪ್ರಃ10: ಚಾಸಾ-9 ಅಶೋಕಕುಮಾರ, ಘಟಕ ವ್ಯವಸ್ಥಾಪಕರು, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 29-05-2019 ರಂದು ಆ.ಸೂಚಿ, ಸಂ.109-110 ಶಾಹಾಪೂರ - ಸಿಂಧಗಿ ಮಾರ್ಗದ ಮೇಲೆ ಚಾಸಾ-1 ಅವರು ಚಾಲಕರಾಗಿದ್ದು ಚಾಸಾ-1 ಅವರು ನಂ.918 ಎಂದು ಇರುತ್ತದೆ, ಚಾಸಾ-6 ಅವರು ನಿರ್ವಾಹಕರಾಗಿದ್ದು ಚಾಸಾ-6 ಅವರ ನಂ.964 ಎಂದು ತಾನು ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಪ್ರಃ11: ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ ಆ-1

ಆ-2

ಆ-3

ಆ-4

ಪ್ರ-12 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ ಆ-1

ಆ-2

ಆ-3

ಆ-4

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿಃ 23-01-2026 ಸಿವಿಲ್ ಹಾಗೂ ಪ್ರ ದ ನ್ಯಾ , ದಂಡಾಧಿಕಾರಿಗಳು,

ಜೇವರ್ಗಿ.